
ರಶ್ ಇದೆ, ಮುಂದಿನ ಬಸ್‌ಗೆ ಹೋದರಾಯಿತು' ಎಂದು ಮತ್ತೆ ಸ್ವಲ್ಪ ಹೊತ್ತು ಕಾಯುತ್ತಿದ್ದೆವು. ಆಯಾ ಬಸ್‌ಗಳ ಕಂಡಕ್ಟರ್‌ಗಳು ಬಸ್‌ನ ಅಕ್ಕಪಕ್ಕ ಅಥವಾ ಮುಂದೆ ನಿಂತು, ಸೀಟಿ ಊದುತ್ತ, ಊರುಗಳ ಹೆಸರು ಕೂಗುತ್ತಾ, ಪ್ರಯಾಣಿಕರಿಗಾಗಿ ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಕಾಯುವುದಿತ್ತು. 'ಸೀಟು ಮಾಡಿಕೊಡ್ತೀನಿ ಬಾರಮ್ಮಾ' ಎಂದು ಅಂಗಲಾಚುವುದೂ ಇತ್ತು. ಅದೆಲ್ಲ ಆಗ ಡೋಂಟ್ ಕೇರ್ ಸಂಗತಿಗಳು. ಹೆಚ್ಚು ಸೀಟುಗಳು ಖಾಲಿ ಇರುವ ಬಸ್ಸನ್ನು ಆಯ್ಕೆ ಮಾಡಿ, ಲಗೇಜ್ ಸಮೇತ ಹತ್ತುತ್ತಿದ್ದೆವು.

'ಅಕ್ಕಾ ಈ ಸೀಟು ಇರಲಾ, ಆ ಸೀಟು ಇರಲಾ' ಎಂದು ಚಾಯ್ಸ್ ಕೇಳುತ್ತಿದ್ದ ತಮ್ಮನಿಗೆ, 'ಆದಷ್ಟು ಮಧ್ಯದ ಸೀಟು ಹಿಡಿ. ಡ್ರೈವರ್ ಹಿಂದಿನ ಒಂದೆರಡು ಸೀಟು ಬೇಡ, ನೂಕುನುಗ್ಗಲಾದರೆ, ಎಲ್ಲರೂ ಅಲ್ಲಿಯೇ ತೂರಿಕೊಳ್ಳುತ್ತಾರೆ. ತುಂಬ ಹಿಂದಿನ ಸೀಟುಗಳನ್ನೂ ಹಿಡಿಯಬೇಡ, ಹಂಪು, ಗುಂಡಿ ಬಂದರೆ ಎತ್ತಿ ಎತ್ತಿ ಹಾಕುತ್ತವೆ, ಬಿಸಿಲು ಬೀಳುವ ಕಡೆ ಬೇಡ, ಟಯರ್ ಮೇಲಿನ ಸೀಟು ಬೇಡ, ಕಾಲಿಡಲು ಅನನುಕೂಲ, ಎರಡು ಸೀಟಿರುವ ಕಡೆ ಬೇಡ, ಇಕ್ಕಟ್ಟಾಗುತ್ತದೆ. ಮೂರು ಸೀಟಿರುವ ಕಡೆ ಹಿಡಿ, ಸ್ಥಳ ಸ್ವಲ್ಪ ವಿಶಾಲವಾಗಿರುತ್ತದೆ ಎಂದೆಲ್ಲ ವಿವರಣೆ ನೀಡುತ್ತಿದ್ದೆ. ಇಷ್ಟೆಲ್ಲ ವಿವರಗಳನ್ನು ಸರಿಯಾಗಿ ಪರಿಶೀಲಿಸಿ ಸೀಟು ಹಿಡಿಯುತ್ತಿದ್ದ. ನಂತರ ದೊಡ್ಡ ದೊಡ್ಡ ಲಗೇಜುಗಳನ್ನೆಲ್ಲ ಮೇಲಕ್ಕೇರಿಸಿ, ಸಣ್ಣಪುಟ್ಟವುಗಳನ್ನೆಲ್ಲ ಕಾಲಿನ ಬಳಿ ತೂರಿಸಿ, ಪಕ್ಕದ ಸೀಟಿನಲ್ಲಿಯೂ ಒಂದು ಬ್ಯಾಗನ್ನು ಇಟ್ಟು, ಕೇಳಿದವರಿಗೆ ನಮ್ಮವರು ಒಬ್ಬರು ಬರುತ್ತಾರೆ ಎಂದು ಯಾಮಾರಿಸುತ್ತ ಆರಾಮವಾಗಿ ಕೂಡುತ್ತಿದ್ದೆ. ಬಸ್ ಬಿಡುವ ತನಕವೂ ತಮ್ಮ, ಪಕ್ಕದ ಸೀಟಿನಲ್ಲಿ ಕುಳಿತುಕೊಂಡು, ಇಬ್ಬರೂ ಲೋಕಾಭಿರಾಮವಾಗಿ ಮಾತನಾಡುತ್ತ, ಡ್ರೈವರ್ ಹತ್ತಿ ಕುಳಿತು ಬಸ್ ಚಾಲೂ ಮಾಡಿದಾಗಲೇ, 'ತಡಿಯಪ್ಪಾ ಅಣ್ಣಾ, ಇಳೀತೀವಿ' ಎನ್ನುತ್ತಲೇ ಇಳಿದು, ಮತ್ತೆ ಕಿಟಕಿಯ ಬಳಿ ಬಂದು, 'ಹೋಗಿ ಬಾ ಅಕ್ಕಾ' ಎಂದು ಪ್ರೀತಿಯಿಂದ ಟಾಟಾ ಮಾಡಿ ಕಳುಹಿಸುತ್ತಿದ್ದ. ನಂತರ ಪುಸ್ತಕ ಓದುತ್ತಲೋ, ಸಂಗೀತ ಆಲಿಸುತ್ತಲೋ ಪ್ರಯಾಣ ಸುಖಕರವಾಗಿರುತ್ತಿತ್ತು.



ಈಗ ಎಲ್ಲವೂ ತಿರುಗು ಮುರುಗು. ಯಾವುದೇ ಸಮಯದಲ್ಲಿ ಬಸ್ ನಿಲ್ದಾಣದಲ್ಲಿ ಕಾಲಿಟ್ಟರೂ ನಮ್ಮಂತಹ ಶಕ್ತಿರೂಪಿಣಿಯರಿಂದ 24*7 ತುಂಬಿ ತುಳುಕುತ್ತಿರುತ್ತವೆ.

ಕೆಂಪು ಬಸ್ಸುಗಳಲ್ಲಿ ಪುರುಷರು, ಖಾಸಗಿ ಬಸ್ಸುಗಳಲ್ಲಿ ಮಹಿಳೆಯರು ಅಲ್ಪಸಂಖ್ಯಾತರೆನ್ನಬಹುದು. ಶಕ್ತಿದೇವಿಯರ ಪವರ್‌ಗೆ ಅವರು ಶರಣಾಗಲೇಬೇಕು. ಒಂದೆರಡು ಬಸ್‌ಗಳನ್ನು ಏರಲು ವಿಫಲ ಪ್ರಯತ್ನ ನಡೆಸಿ, ಸೋತು ಸುಣ್ಣವಾಗಿ ಖಾಸಗಿ ಬಸ್‌ನಿಲ್ದಾಣದ ಕಡೆಗೆ ಹೆಜ್ಜೆ ಹಾಕುವವರಿದ್ದಾರೆ. ಮಹಿಳೆಯರು ಮಾತ್ರ ಯಾವುದೇ ಊರಿನ ಬಸ್ ಬಂದರೂ, ಕಹಳೆ ಶಬ್ದ ಕೇಳಿ, ಅಸ್ತ್ರ ಶಸ್ತ್ರಗಳೊಂದಿಗೆ ಯುದ್ಧಭೂಮಿಗಿಳಿಯುವಂತೆ, ಮೈತುಂಬ ಲಗೇಜುಗಳನ್ನು ಹೇರಿಕೊಂಡು 'ಹೋ' ಎಂದು ಬಸ್ಸು ಹತ್ತಲು ದೌಡಾಯಿಸುವರು. ಉಸುಕಿನಲ್ಲಿ ಮೊಗೆದಂತೆಲ್ಲ ನೀರು ತುಂಬಿಕೊಳ್ಳುವಂತೆ, ಬಸ್‌ಗಳೆಲ್ಲ ತುಂಬಿ, ವಾಲಾಡುತ್ತ ಹೊರಟರೂ ನಿಲ್ದಾಣದಲ್ಲಿರುವ ಮಹಿಳಾ ಸಂಖ್ಯೆ ಕಡಿಮೆಯಾಗದು. ಮಹಿಳೆಯಲ್ಲಿರುವ ಶಕ್ತಿ ಪ್ರದರ್ಶನಕ್ಕೆ ಇದೊಂದು ಸೂಕ್ತ ವೇದಿಕೆ ಎನ್ನಬಹುದು. ಮೈಯಲ್ಲಿ 'ಶಕ್ತಿ' ಇರುವವರಿಗೆ ಮಾತ್ರ ಈ ಯೋಜನೆ ಎಂದು ಬಹುಬೇಗ ಅನುಭವವಾಗಿದ್ದರಿಂದ ಇತ್ತೀಚೆಗೆ ರೈಲುಪ್ರಯಾಣಕ್ಕೆ ಒಗ್ಗಿಕೊಂಡಿದ್ದೆ.

ಬೆಳ್ಳಿಗ್ಗೆ ಮೂರು ಗಂಟೆಗೇ ನಿದ್ದೆಗಣ್ಣಲ್ಲಿರುವ ಮಗಳನ್ನು ಎಬ್ಬಿಸಿದ್ದೆ. ಅಷ್ಟರಲ್ಲಾಗಲೇ ತಮ್ಮ ಎದ್ದು ಕಾರು ಹೊರತೆಗೆದು ರೆಡಿ ಮಾಡಿದ್ದ. ಸೋಮವಾರವಾದ್ದರಿಂದ ಬಸ್‌ನಿಲ್ದಾಣ ಜನಜಂಗುಳಿಯಿಂದ ತುಂಬಿ ತುಳುಕುತ್ತಿತ್ತು. ಬೆಂಗಳೂರಿಗೆ ಹೋಗುವ ಬಸ್‌ಗಳ ಸಂಖ್ಯೆ ಹೆಚ್ಚಿದ್ದರೂ, ಬಸ್ಸೇರಲು ಸೋತು ವಾಪಾಸು ಬರುವುದೇ ಹೆಚ್ಚಿತ್ತು. ಅಷ್ಟರಲ್ಲಿ ಆಗಮಿಸಿದ ಅರವತ್ತರ ಆಸುಪಾಸಿನ ಮಹಿಳೆಯೊಬ್ಬರು, 'ಎರಡೂ ಮೊಣಕಾಲಿನ ಚಿಪ್ಪಿನ ಆಪರೇಷನ್ನು ಮಾಡಿಸಿಕೊಂಡು ಆರು ತಿಂಗಳಾಯಿತು' ಎಂದು ಪಕ್ಕದವರ ಬಳಿ ಹೇಳುವುದನ್ನು ಕಂಡಾಗ, ಜೇಡ ಸೋಲೊಪ್ಪದಂತೆ ಪುನಃ ಪುನಃ ಬಲೆ ನೇಯುವುದನ್ನು ನೋಡಿದ ಅಲೆಕ್ಸಾಂಡರ್‌ಗೆ ಜ್ಞಾನೋದಯವಾಗುವಂತೆ, ಅಂತಹ ಧೀಮಂತ ಮಹಿಳೆಯನ್ನು ನೋಡಿ ನಮಗೂ 'ಗೆದ್ದೇ ಗೆಲ್ಲುವೆವು ಒಂದು ದಿನ' ಎನ್ನುವಂತೆ ಸ್ಫೂರ್ತಿ ಉಕ್ಕಿ ಮರಳಿ ಯತ್ನವ ಮಾಡತೊಡಗಿದೆವು.

ಮೂರು ಗಂಟೆಯಿಂದ ಶುರುವಾದ ನಮ್ಮ ಬಸ್ಸೇರುವ ಹೋರಾಟ ಐದು ಗಂಟೆಯಾದರೂ ಅದೇ ಹುಮ್ಮಸ್ಸಿನಲ್ಲಿ ಜಾರಿಯಲ್ಲಿತ್ತು. ಕತ್ತಲಲ್ಲಿ ಮೂವರೂ ಮೂರು ದಿಕ್ಕಿಗೆ ಕಣ್ಣು ಹಾಯಿಸುತ್ತಾ ನಿಂತಿದ್ದೆವು. ಕೆಲವು ಬಸ್‌ಗಳನ್ನು ತುಂಬ ಹಿಂದೆಯೇ ನಿಲ್ಲಿಸುವುದಿತ್ತು. ಅಲ್ಲಿಗೂ ಬಿಡದಂತೆ ಜೇನುನೊಣಗಳಂತೆ ಮುಕುರುತ್ತಿದ್ದರು. ತಮ್ಮ ಮತ್ತು ಮಗಳು ಇಬ್ಬರೂ ಒಂದೊಂದು ಕಡೆ ನಡೆಸುತ್ತಿದ್ದ ಬಸ್ಸಾರೋಹಣ ಕಾರ್ಯಕ್ರಮವನ್ನು, ಲಗೇಜ್ ಕಾಯ್ದುಕೊಂಡು ನಿಂತಲ್ಲೇ ನಿಂತಿರುತ್ತಿದ್ದ ನಾನು ಮಂಗನಂತೆ ವೀಕ್ಷಿಸುತ್ತಿದ್ದೆ. ಅದ್ಯಾವ ಮಾಯೆಯಲ್ಲೋ ತಮ್ಮ ಒಂದು ಬಸ್ ಹತ್ತಿ, ಸೀಟು ಹಿಡಿದು ಪಟ್ಟಾಗಿ ಕೂತೇಬಿಟ್ಟ. ಅದನ್ನು ನಮಗೆ ತಿಳಿಸಲು ಜೇಬಿಂದ ಮೊಬೈಲ್ ತೆಗೆದು ಫೋನ್‌ಕಾಲ್ ಕೂಡ ಮಾಡಲಾಗದಷ್ಟು ಮಹಿಳೆಯರ ನಡುವೆ ಸಿಲುಕಿ, ಸಾಕಾಗಿ ಕೈಕಾಲು ತುಳಿಯುತ್ತ, ತುಳಿಸಿಕೊಳ್ಳುತ್ತಲೇ ಇಳಿದು ಬಂದಿದ್ದ. ಸೀಟು ಕೈತಪ್ಪಿದ್ದರಿಂದ ಸಿಟ್ಟು ಉಕ್ಕೇರಿ 'ನಾ ಯಾವ ಬಸ್ಸು ಹಿಡಿತೀನಿ ಅಂತ ನೋಡಲಿಕ್ಕಾಗಲಿಲ್ಲವಾ ನಿಮ್ಮಿಬ್ಬರಿಗೂ' ಎಂದು ಮುಖಕ್ಕೆ ಮುಂಜಮುಂಜಾನೆಯೇ ಮಂಗಳಾರತಿ ಎತ್ತಿದ್ದ. ಆ ಗಳಿಗೆಯಿಂದ ಅವನು ಯಾವ ಯಾವ ಬಸ್ಸಿನ ಕಡೆಗೆ ಓಡುತ್ತಾನೋ, ಲಗೇಜು ಸಮೇತ ಏದುಸಿರು ಬಿಡುತ್ತಾ ಬೆನ್ನಟ್ಟಿ ಹೋಗಿ, ಅದರ ಸಮೀಪವೇ ಆಸೆ ಕಂಗಳಿಂದ ದಿಟ್ಟಿಸುತ್ತಾ ನಿಲ್ಲತೊಡಗಿದೆವು. ಕೈಜಾರಿದ ಪ್ರೇಯಸಿಯಂತೆ, ಕೈತಪ್ಪಿ ಹೋಗುತ್ತಿದ್ದ ಬಸ್ಸುಗಳನ್ನು ನಿಟ್ಟುಸಿರುಗರೆಯುತ್ತ ನೋಡುವುದೇ ಆಯಿತು. ನೆಟ್ಟಗಿದ್ದವರದ್ದೇ ಈಪಾಟಿ ಕಷ್ಟಪಡುವಾಗ, ಆ ಕಾಲಾಪರೇಷನ್ ಆದ ಮಹಿಳೆ ಅದು ಹೇಗೆ ಬಸ್ಸು ಹತ್ತುವಳೋ ಎನ್ನುವ ಯೋಚನೆಯೂ ಬಾರದಿರಲಿಲ್ಲ.

ಅಂತೂ ಒಂದು ಶುಭ ಗಳಿಗೆಯಲ್ಲಿ, ಮಹಿಳೆಯರ ನಡುವೆ ತೂರಿಕೊಂಡು ಸೀಟು ಹಿಡಿಯುವಲ್ಲಿ ಸಫಲನಾದ. ಮಗಳು ಅತ್ತಇತ್ತ, ಸುತ್ತಮುತ್ತ, ಏನೊಂದೂ, ಯಾರನ್ನೂ ಗಣನೆಗೆ ತೆಗೆದುಕೊಳ್ಳದೆ, ಅವರಿವರ ಕೈ, ಕಾಲು, ಭುಜ, ಸೊಂಟ ಎಂದು ನೋಡದೆ, ಯಾರ ಗೊಣಗಾಟವನ್ನೂ ಕಿವಿಗೆ ಹಾಕಿಕೊಳ್ಳದೆ, ಬ್ಯಾಕ್‌ಪ್ಯಾಕಿನಿಂದ ಅವರಿವರಿಗೆ ತಿವಿಯುತ್ತಲೇ ಬ್ಯಾಲೆನ್ಸ್ ಮಾಡಿಕೊಂಡು ಬಸ್ಸನ್ನು ಏರಿ ಮಾವ ಹಿಡಿದಿದ್ದ ಸ್ಥಳದಲ್ಲಿ ಖುಷಿಯಿಂದ ಕುಳಿತುಕೊಳ್ಳುವ ಹೊತ್ತಿಗೆ ಗಂಟೆ ಆರಾಗಿತ್ತು. ಕಂಡಕ್ಟರ್ ತನ್ನ ಸೀಟನ್ನೂ ಬಿಡದೆ ಆಕ್ರಮಿಸಿದವರ ಮೇಲೆ ಹರಿಹಾಯುತ್ತಿದ್ದ. ಮಗಳ ಲಗೇಜನ್ನು ಕಿಟಕಿಯಿಂದ ಕೊಡಲು, ಕಿಟಕಿಯ ಬಳಿ ಕುಳಿತವರನ್ನು ಮಾತನಾಡಿಸಿದರೆ, ಅದು ಕಾಲು ಆಪರೇಷನ್ ಆಗಿದ್ದ ಆ ಸಾಹಸಿ ಮಹಿಳೆಯಾಗಿರಬೇಕೇ!

ಪ್ರತಿಕ್ರಿಯಿಸಿ: feedback@sudha.co.in